# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ | : | 764 (885) |
| ಸದಸ್ಯರ ಹೆಸರು | : | ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದ್ದವರು) |
| ಉತ್ತರಿಸುವ ದಿನಾಂಕ | : | 16/12/2024. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು . |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇತ್ತೀಚೆಗೆ ಶಾಲಾ ಮಕ್ಕಳು ಮತ್ತು ಹದಿಹರೆಯದವರು ಸಾಮಾಜಿಕ ಜಾಲತಾಣಕ್ಕೆ ಸಿಲುಕಿ ರಾಷ್ಟ್ರದ ಮುಖ್ಯವಾಹಿನಿಯಿಂದ ದೂರ ಸರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಈ ಪಿಡುಗನ್ನು ಹೋಗಲಾಡಿಸಲು ಕೈಗೊಂಡಿರುವ ಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಪ್ರಾಯೋಜಿತ ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಯೋಜನೆಯ nodal agency ಯಾಗಿ ಡಿ ಎಸ್ ಇ ಆರ್ ಟಿಯು ಕಾರ್ಯ ನಿರ್ವಹಿಸುತ್ತಿದ್ದು, ರಾಜ್ಯ ಜನಸಂಖ್ಯಾ ಶಿಕ್ಷಣ ಯೋಜನೆ ಘಟಕದ (ಎನ್‌ಪಿಇಪಿ ಸೆಲ್) ಮೂಲಕ NPEP (National Population Education Project) ರಡಿಯಲ್ಲಿ ಈ ಕೆಳಕಂಡ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ.<br><br>1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಸಹಯೋಗದಲ್ಲಿ ಆಯುಷ್ಮಾನ್ ಭಾರತ್ ಯೋಜನೆಯಡಿ ಶಾಲೆಗಳಲ್ಲಿ ಶಾಲಾ ಆರೋಗ್ಯ ಮತ್ತು ಕ್ಷೇಮ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರಾಜ್ಯದ ಸರ್ಕಾರಿ/ಅನುದಾನಿತ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಕರಿಗೆ 11 ಮಾಡ್ಯೂಲ್ ಗಳ ಕುರಿತು ತರಬೇತಿ ನೀಡಲಾಗಿದೆ. ಸಮೂಹ ಮಾಧ್ಯಮ ಹಾಗೂ ಅಂತರ್ಜಾಲಗಳ ಸುರಕ್ಷಿತ ಬಳಕೆ ಕೂಡ ಒಂದು ಮಾಡ್ಯೂಲ್ ಆಗಿರುತ್ತದೆ. ಇದರಲ್ಲಿ ಅಂತರ್‌ಜಾಲ ಹಾಗೂ ಸಾಮಾಜಿಕ ಮಾಧ್ಯಮಗಳ ಸುರಕ್ಷಿತ ಬಳಕೆಯ ಬಗ್ಗೆ ಅರಿವು ಮೂಡಿಸಿದೆ.<br>2. ಶಾಲೆಗಳಲ್ಲಿ ಮಕ್ಕಳಿಗೆ ಪಾತ್ರಾಭಿನಯ, ಜಾನಪದ ನೃತ್ಯ, ಪೋಸ್ಟರ್ ಬರೆಯುವ ಸ್ಪರ್ಧೆ, ಚರ್ಚಾ ಕೂಟ, ಪ್ರಬಂಧ ಬರಹ, ಚಿತ್ರಕಲೆ, ತಜ್ಞರಿಂದ ಸಮಾಲೋಚನೆ ಮುಂತಾದ ಚಟುವಟಿಕೆಗಳ ಮೂಲಕ Cyber Hygiene, Cyber Foot Prints ಹಾಗೂ ಸಮೂಹ ಮಾಧ್ಯಮ ಹಾಗೂ ಅಂತರ್ಜಾಲಗಳ ಸುರಕ್ಷಿತ ಬಳಕೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br>3. 2023-24ನೇ ಸಾಲಿನಲ್ಲಿ ಅಂತರ್ಜಾಲ ಹಾಗೂ ಸಾಮಾಜಿಕ ಮಾಧ್ಯಮಗಳ ಸುರಕ್ಷಿತ ಬಳಕೆಯ ಬಗ್ಗೆ ಅರಿವು ಮೂಡಿಸಲು "ಪೋಸ್ಟರ್" ಸಿದ್ಧಪಡಿಸಿ ಶಾಲೆಗಳಿಗೆ ವಿತರಿಸಲಾಗಿದೆ. ಸಮೂಹ ಮಾಧ್ಯಮ ಹಾಗೂ ಅಂತರ್ಜಾಲಗಳ ಸುರಕ್ಷಿತ ಬಳಕೆ ಕುರಿತು "ವೀಡಿಯೋಗಳನ್ನು" ಸಿದ್ಧಪಡಿಸಿ ಅರಿವು |

| | | |
|---|---|---|
| | | ಮೂಡಿಸಲು ಕ್ರಮ ವಹಿಸಲಾಗಿದೆ.<br>4. "ಸುಮನ-2023 Population & Adolescence Education News Letter" ಅನ್ನು ಹೊರತರಲಾಗಿದ್ದು, ಇದರಲ್ಲಿ ಸಾಮಾಜಿಕ ಮಾಧ್ಯಮಗಳ ಸುರಕ್ಷಿತ ಬಳಕೆ ಕುರಿತು ಲೇಖನಗಳನ್ನು ಪ್ರಕಟಿಸಲಾಗಿದೆ.<br>5. ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಮತ್ತು Meta ಸಂಸ್ಥೆಯವರ ಸಹಯೋಗದೊಂದಿಗೆ "ಡಿಜಿಟಲ್ ಪೌರತ್ವ" ಕಾರ್ಯಕ್ರಮದಡಿಯಲ್ಲಿ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಸಾಮಾಜಿಕ ಜಾಲತಾಣಗಳ ಸುರಕ್ಷಿತ ಬಳಕೆಯ ಬಗ್ಗೆ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲಾಗುತ್ತಿದೆ.<br>6. ಶಿಕ್ಷಣ ಫೌಂಡೇಷನ್ ಸಂಸ್ಥೆಯ ಸಹಯೋಗದೊಂದಿಗೆ 4534 ಸರ್ಕಾರಿ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಡಿಜಿಟಲ್ ಕೌಶಲ್ಯ ಕಾರ್ಯಕ್ರಮವನ್ನು ಅನುಷ್ಠಾನಿಸಲಾಗಿದೆ. ಇದರಲ್ಲಿ ದಿನನಿತ್ಯದ ಚಟುವಟಿಕೆಗಳಿಗೆ ಬೇಕಾದ ಡಿಜಿಟಲ್ ಸಾಮರ್ಥ್ಯಗಳು ಮತ್ತು ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳನ್ನು ಜವಾಬ್ದಾರಿಯುತವಾಗಿ ಬಳಸಲು ಬೇಕಾದ ಕೌಶಲ್ಯಗಳ ಕುರಿತು ಅರಿವು ಮೂಡಿಸಲಾಗಿದೆ.<br>7. 2024-25ನೇ ಸಾಲಿನಲ್ಲಿ CIET NCERT ವತಿಯಿಂದ cyber safety, Cyber Threats ಕುರಿತು ರಾಜ್ಯದ ವಿದ್ಯಾರ್ಥಿಗಳು, ಶಿಕ್ಷಕರು, ಪಾಲಕರು, ಶೈಕ್ಷಣಿಕ ಸಂಸ್ಥೆಗಳು ಹಾಗೂ ಇತರೆ ಭಾಗೀದಾರರಿಗೆ ವಿವಿಧ ದಿನಾಂಕಗಳಂದು 3, 5 ಹಾಗೂ 4 ದಿನಗಳ ತರಬೇತಿಯನ್ನು ನೀಡಲಾಗಿದೆ.<br>8. 2024-25ನೇ ಸಾಲಿನಲ್ಲಿ CIET NCERT ವತಿಯಿಂದ ಹಾಗೂ cyber peace foundation ಸಹಯೋಗದೊಂದಿಗೆ cyber security ಗೆ ಸಂಬಂಧಿಸಿದಂತೆ e RAKSHA ಸ್ಪರ್ಧೆಯನ್ನು ಆಯೋಜಿಸಲಾಗಿದೆ.<br>9. ಟ್ಯಾಲ್ಪ್ ಯೋಜನೆಯಡಿ ತಂತ್ರಜ್ಞಾನ ಬಳಕೆಯ ಬಗ್ಗೆ 38,632 ಶಿಕ್ಷಕರಿಗೆ ಇಂಡಕ್ಷನ್ ತರಬೇತಿಯನ್ನು ಹಾಗೂ 9,644 ಶಿಕ್ಷಕರಿಗೆ ರಿಫ್ರೆಷರ್ ತರಬೇತಿಯನ್ನು ನೀಡಲಾಗಿದೆ. ಇದರಲ್ಲಿ cyber security ಗೆ ಸಂಬಂಧಿಸಿದಂತೆ ಮಾಹಿತಿ ನೀಡಲಾಗಿದೆ. |
| ಆ) | ಇತ್ತೀಚಿನ ವರ್ಷಗಳಲ್ಲಿ Artificial intelligence ಬೆಳವಣಿಗೆ ಜನಜೀವನದ ಪ್ರತಿರಂಗದಲ್ಲೂ ಹಬ್ಬುತ್ತಿದ್ದು ಶಾಲಾ | 2024-25ನೇ ಸಾಲಿನಲ್ಲಿ EK Step (NGO) ರವರ ಸಹಕಾರದೊಂದಿಗೆ Artificial Intelligence ಬಳಸಿಕೊಂಡು ಆಯ್ದ ಸರ್ಕಾರಿ ಶಾಲೆಗಳಲ್ಲಿ 4 ಮತ್ತು |

| | | |
|---|---|---|
| | ಮಕ್ಕಳಲ್ಲಿ ಸಾಮಾಜಿಕ ಜಾಲತಾಣ ಹೊರತುಪಡಿಸಿ Artificial intelligence ಬಗ್ಗೆ ಒಲವು ಮತ್ತು ಅಸಕ್ತಿ ಮೂಡಿಸುವುದು ಅಗತ್ಯವೆಂಬುದನ್ನು ರಾಜ್ಯ ಸರ್ಕಾರ ಮನಗಂಡಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ರೂಪಿಸಿರುವ ಕಾರ್ಯಕ್ರಮಗಳು ಯಾವುದು; (ಪೂರ್ಣ ಮಾಹಿತಿ ನೀಡುವುದು) | 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಭಾಷಾಭ್ಯಾಸ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ.<br><br>CIET NCERT ವತಿಯಿಂದ ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಶಿಕ್ಷಕರಿಗೆ 5 ದಿನಗಳ Orientation ತರಬೇತಿಯಲ್ಲಿ Artificial Intelligence ಮತ್ತು Safety & Security ಬಗ್ಗೆ ತರಬೇತಿಯನ್ನು ನೀಡಲಾಗಿದ್ದು, ಸದರಿ ಶಿಕ್ಷಕರು ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲು ಕ್ರಮ ವಹಿಸಿದೆ. |
| ಇ) | ಶಾಲಾ ಮಕ್ಕಳ ಮತ್ತು ಕಿರಿಯರಲ್ಲಿ ಸಾಮಾಜಿಕ ಜಾಲತಾಣ ಉಪಯೋಗಿಸುವ ಬಗ್ಗೆ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ವಯಸ್ಸಿನ ನಿರ್ಬಂಧ ಹೇರಲು ನಿರ್ಧರಿಸಿವೆಯೇ; ಹಾಗಿದ್ದಲ್ಲಿ ಪೂರ್ಣ ಮಾಹಿತಿ ನೀಡುವುದು? | ಇಲ್ಲ |

**ಸಂಖ್ಯೆ: ಇಪಿ 403 ಪಿಜಿಸಿ 2024**

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು